# ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ

ಸಂ:ಮನಪಾಬ/ಕಂ.ಶಾ/ತೆರಿಗೆ/2009-10 ದಿನಾಂಕ:06.07.2009

## ಸಾರ್ವಜನಿಕರ ಪ್ರಕಟಣೆ

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಅಡಿ ಪ್ರತಿ ಮೂರು ವರ್ಷಕ್ಕೊಮ್ಮೆ ಸ್ಥಳೀಯ ಸಂಸ್ಥೆ ನಿಗಧಿಗೊಳಿಸುವ ಕಂದಾಯ ದರಕ್ಕೆ ಶೇಕಡ 15 ರಿಂದ 30 ರಷ್ಟು ಹೆಚ್ಚಿಸಿ ಪರಿಷ್ಕರಣೆ ದರ ನಿರ್ಧರಿಸಲು ಮಾನ್ಯ ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಪೌನಿ/ಎಸ್.ಎ.ಎಸ್./52/2005-06, ದಿನಾಂಕ:02.09.2005 ಇರುತ್ತದೆ.

ಅದರಂತೆ ಈ ಮಹಾನಗರಪಾಲಿಕೆಯು ಹಾಲಿದ್ದ ಕಂದಾಯ ದರ ವಸತಿಗಾಗಿ ಶೇಖಡ 0.60 ಕ್ಕೆ ಶೇಕಡ 0.72 ರಷ್ಟು ಹಾಗೂ ವಾಣಿಜ್ಯಕ್ಕಾಗಿ ಶೇಕಡ 1.00 ಕ್ಕೆ ಶೇಕಡ 1.25 ರಷ್ಟು ಹೆಚ್ಚಿಸಿ ದಿನಾಂಕ:15.06.2009 ರಂದು ಜರುಗಿದ ಸಾಮಾನ್ಯ ಸಭೆಯ ಠರಾವು ಸಂಖ್ಯೆ:185 ನೇದರನ್ವಯ ಪರಿಷ್ಕರಣೆ ದರಗಳಿಗೆ ಅನುಮೋದನೆ ನೀಡಿರುತ್ತದೆ.

ಈ ಪ್ರಯುಕ್ತ ವಸತಿ ಉದ್ದೇಶಕ್ಕೆ ಈಗಿರುವ ಕಂದಾಯ ದರ ಶೇಕಡ 0.60 ಕ್ಕೆ ಪರಿಷ್ಕರಣದಿಂದ ಶೇಕಡ 0.72 ರಷ್ಟು ಹಾಗೂ ವಾಣಿಜ್ಯ ಉದ್ದೇಶಕ್ಕಾಗಿ ಈಗಿರುವ ಕಂದಾಯ ದರ ಶೇಕಡ 1.00 ಕ್ಕೆ ಪರಿಷ್ಕರಣದಿಂದ ಶೇಕಡ 1.25 ರಷ್ಟು ನಿರ್ಧರಣೆಯಾಗಿರುತ್ತದೆ. ಈ ಪರಿಷ್ಕರಣೆ ದರ ಪ್ರಸ್ತುತ ಸಾಲಿನ ಆರ್ಥಿಕ ವರ್ಷದಿಂದ ಅಂದರೆ 01.04.2009 ರಿಂದ ಜಾರಿಗೆ ಬಂದಿರುತ್ತದೆ.

ಸಾರ್ವಜನಿಕರು ಸಹಕರಿಸಿ ಈ ಪರಿಷ್ಕೃತ ದರಗಳನ್ನು ಅನುಸರಿಸಿ ತಮ್ಮ ಆಸ್ತಿಗಳಿಗೆ ಉಪನೊಂದಣಾಧಿಕಾರಿಗಳ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆ ಆಧಾರವಾಗಿ ತೆರಿಗೆ ಲೆಕ್ಕಾಚಾರ ಮಾಡಿ ಕಂದಾಯ ಪಾವತಿಸುವಂತೆ ಹಾಗೂ ಈಗಾಗಲೇ ಪಾವತಿಸಲ್ಪಟ್ಟ ಕಂದಾಯಕ್ಕೆ ಬರುವ ವ್ಯತ್ಯಾಸದ ಕಂದಾಯ ರಕಂ ಪಾವತಿಸಲು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ.

ಸಹಿ/-
ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ.

ಸಹಿ/-
ಅಧ್ಯಕ್ಷರು
ತೆರಿಗೆ ಹಣಕಾಸು ಮತ್ತು ಅಪೀಲುಗಳ
ಸ್ಥಾಯಿ ಸಮಿತಿ,
ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ

ಸಹಿ/-
ಮಹಾಪೌರರು
ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ.